ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE

# ಮೇಲ್ಮನೆ ಗದ್ದಲದ ಮಧ್ಯಂತರ ವರದಿ ಸಲ್ಲಿಕೆ

## ಸಭಾಪತಿಗೆ 84 ಪುಟಗಳ ವರದಿ | ಧರ್ಮೇಗೌಡರ ಡೆತ್‌ನೋಟ್ ಪರಿಶೀಲಿಸಿ ಮಾಹಿತಿ?

**ಬೆಂಗಳೂರು:** ಕಳೆದ ಅಧಿವೇಶನದ ವೇಳೆ ವಿಧಾನ ಪರಿಷತ್‌ನಲ್ಲಿ ನಡೆದಿದ್ದ ಗದ್ದಲ, ಕೋಲಾಹಲದ ಘಟನೆ ಪರಿಶೀಲನೆಗೆ ರಚನೆಯಾಗಿದ್ದ ಸದನ ಸಮಿತಿ 84 ಪುಟಗಳ ಮಧ್ಯಂತರ ವರದಿ ಯನ್ನು ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಅವರಿಗೆ ಸಲ್ಲಿಸಿದೆ. ಸಮಿತಿಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಹಾಗೂ ಸದಸ್ಯರಾದ ಬಿ.ಕೆ. ಹರಿಪ್ರಸಾದ್ ಮತ್ತು ಆರ್. ಬಿ. ತಿಮ್ಮಾಪೂರ ಶುಕ್ರವಾರ ವರದಿ ಸಲ್ಲಿಸಿದರು. ಈ ಘಟನೆ ವೇಳೆ ಅಧಿಕಾರಿಗಳು ಸೂಕ್ತವಾಗಿ ನಿರ್ವಹಿಸುವಲ್ಲಿ ವಿಫಲರಾ ಗಿದ್ದಾರೆಂದು ಉಲ್ಲೇಖಿಲಾಗಿದೆ ಎನ್ನಲಾಗಿದೆ.

ವರದಿ ಸಲ್ಲಿಸಿ ಮಾತನಾಡಿದ ಮರಿತಿಬ್ಬೇಗೌಡ, ವರದಿ ಸಲ್ಲಿಕೆಗೆ 20 ದಿನ ಕಾಲಾವಕಾಶ ನೀಡಲಾಗಿತ್ತು. ಈ ಅವಧಿ ಯಲ್ಲಿ ಪೂರ್ಣ ವರದಿ ಸಲ್ಲಿಸಲು ಸಾಧ್ಯವಾಗದ ಕಾರಣ ಮಧ್ಯಂತರ ವರದಿ ಸಲ್ಲಿಸಿದ್ದೇವೆ. ಈವರೆಗೆ ನಡೆದ ಸಮಿತಿ ಯ ಐದು ಸಭೆಗಳ ಪೈಕಿ ಮೊದಲ ನಾಲ್ಕು ಸಭೆಗಳ ವರದಿ ಹಾಗೂ ಸಾಕ್ಷ್ಯಾಧಾರಗಳನ್ನು ಸಿ.ಡಿ. ರೂಪದಲ್ಲಿ ನೀಡಲಾ ಗಿದೆ. ಪೂರ್ಣ ವರದಿ ಸಲ್ಲಿಕೆಗೆ ಕಾಲಾವಕಾಶ ಕೇಳಲಾಗುವುದು ಎಂದರು. ಘಟನೆ ದಿನ ಸದನದಲ್ಲಿ ಉಪಸ್ಥಿತರಿದ್ದ ವಿಧಾನ ಪರಿಷತ್ ಕಾರ್ಯದರ್ಶಿ, ಮಾರ್ಷಲ್ ಮತ್ತು ಸದಸ್ಯ ಪಿ.ಆರ್. ರಮೇಶ್ ಅವರಿಗೆ ನೋಟಿಸ್ ನೀಡಿ ಪ್ರಾಥಮಿಕ ಹೇಳಿಕೆ ಪಡೆಯಲಾಗಿದೆ ಎಂದರು.

ಅಲ್ಲದೆ, ಘಟನೆಯ ನಂತರ ನಡೆದ ಉಪ ಸಭಾಪತಿ ಧರ್ಮೇಗೌಡ ಅವರ ಸಾವಿಗೂ ಮುನ್ನ ಬರೆದಿಟ್ಟಿದ್ದರೆನ್ನಲಾದ ಪತ್ರ ಒದಗಿಸುವಂತೆ ಕೋರಿ ಗೃಹ ಇಲಾಖೆ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿದೆ. ಹಾಗಾಗಿ ಪೂರ್ಣ ವರದಿ ಸಲ್ಲಿಸಲು ಎಷ್ಟು ಸಮಯ ಬೇಕಾಗಬಹುದು ಎಂಬುದನ್ನು ಸ್ಪಷ್ಟಪಡಿಸಿ ಕೊಂಡು ಸಭಾಪತಿಗಳಿಗೆ ಪತ್ರ ಬರೆದು ಹೆಚ್ಚಿನ ಸಮಯ ಕೇಳಲಾಗುವುದು ಎಂದು ತಿಳಿಸಿದರು.

### ವರದಿಯಲ್ಲೇನಿದೆ?

ಘಟನೆ ಕುರಿತಾಗಿ ವಿವಿಧ ಖಾಸಗಿ ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ದೃಶ್ಯಾವಳಿ ಗಳು, ವಾರ್ತಾ ಇಲಾಖೆಯಿಂದ ಚಿತ್ರೀಕರಿಸಿರುವ ಹಾಗೂ ಸಿಸಿಟಿವಿ ದಾಖಲೆಗಳಗಿರುವ ದೃಶ್ಯಾವಳಿ ಗಳನ್ನು ಘಟನೆಗೆ ಸಾಕ್ಷ್ಯವಾಗಿ ಪರಿಗಣಿಸಿದೆ. ಇದರ ಆಧಾರದಲ್ಲಿ ಘಟನೆಗೆ ಯಾರು ಕಾರಣ ಎನ್ನುವ ಬಗ್ಗೆ ಹಾಗೂ ಘಟನೆನಡೆದದಿನಸಭೆನಿರ್ವಹಣೆಯಲ್ಲಿನಲೋಪದೋಷಗಳು, ಸಂವಿಧಾನ ಉಲ್ಲಂಘನೆ, ವಿಧಾನ ಪರಿಷತ್ ನಿಯಮಗಳ ಉಲ್ಲಂಘನೆ ಬಗ್ಗೆಯೂ ಉಲ್ಲೇಖಗಳಿವೆ ಎನ್ನಲಾಗಿದೆ.